## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 235/2023

**ಸಾಕ್ಷಿಯನ್ನು ದಿಃ 02.06.2026 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಲಿಂಗಪ್ಪ | ಸಿಡಬ್ಲ್ಯೂಃ 8 | ಪಿಡಬ್ಲ್ಯೂಃ 8 |
| ತಂದೆಯ ಹೆಸರು | ಬಂಗಾರಪ್ಪ | | |
| ವಯಸ್ಸು | 55 ವರ್ಷ | | |
| ಕೆಲಸ | ವ್ಯಾಪಾರ | | |
| ವಾಸಸ್ಥಳ | ಎನ್.ಎಸ್ ಬಡಾವಣೆ | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಸಾಕ್ಷಿ ಅಮಾನತ್ತು ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ಮಹಜರನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 3-4 ವರ್ಷಗಳ ಹಿಂದೆ ಚರ್ಚ್ ಪಕ್ಕದಲ್ಲಿರುವ ಲೈಟ್ ಕಂಬದ ಹತ್ತಿರ ಮಾಡಿದ್ದೇನೆ. ಆರೋಪಿ ನನಗೆ ಕರೆ ಮಾಡಿ ಅಲ್ಲಿಗೆ ಕರೆದಿದ್ದರು. ಪೋಲಿಸರು ಮಹಜರಿಗೆ ಬಂದಿದ್ದಾರೆ ಬನ್ನಿ ಎಂದು ಆರೋಪಿ ನನ್ನನ್ನು ಕರೆದರು. ಅಲ್ಲಿ ಪೋಲಿಸರು ನನ್ನ ಸಮಕ್ಷಮ ಒಂದು ರಾಡು ಮತ್ತು 4 ಕಲ್ಲುಗಳನ್ನು ಅಮಾನತ್ತುಪಡಿಸಿಕೊಂಡರು. ಆಗ ಸಮಯ ಸುಮಾರು 1 ಗಂಟೆಯಾಗಿರಬಹುದು. ನನ್ನ ಜೊತೆ ಇನ್ನೊಬ್ಬರು ಸಹಿ ಹಾಕಿದರು ಅವರ ಹೆಸರು ಗೊತ್ತಿಲ್ಲ. ನಿಪಿ-7 ರಲ್ಲಿ ಏನು ಬರವಣೆಯಾಗಿದೆ ಎಂದು ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಮು.ಮಾ-3ರ ಪೆನ್ನನ್ನು ಈ ಹಿಂದೆ ನೋಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ದಿನಾಂಕಃ 21.3.2023 ರಂದು ಆರೋಪಿ ಹುಣಸೂರು ಪಟ್ಟಣ ಠಾಣೆಗೆ ಹಾಜರಾಗಿ ತಾನು ಕೃತ್ಯಕ್ಕೆ ಉಪಯೋಗಿಸಿದ ಮು.ಮಾ-3 ಪೆನನ್ನು ಹಾಜರುಪಡಿಸಿದ ಮೇರೆಗೆ ಅದನ್ನು ಪೋಲಿಸರು ನನ ಮತ್ತು ಚಾಸಾ-9 ರವರ ಸಮಕ್ಷಮ ಮಧ್ಯಾಹ್ನ 3 ರಿಂದ 3-35ರವರೆಗೆ ಮಹಜರು ಕ್ರಮ ಜರುಗಿಸಿ ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮಾಡಿದ ನಿಪಿ-7ರ ಮಹಜರಿಗೆ ನಾನು ಸಹಿ ಮಾಡಿದ್ದೇನೆ ಮತ್ತು ಅದರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್.ಎನ್ ವಕೀಲರಿಂದಃ**

ಇಲ್ಲ ಎನ್ನುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.